ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಗಳು**

ವಿಷಯ: 2022-23ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿರುವ ವಿದ್ಯಾರ್ಥಿನಿಲಯಗಳ ಕಛೇರಿ ವೆಚ್ಚ, ಹಾಗೂ ಇತರೆ ವೆಚ್ಚಗಳಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ:ಇಡಿ/91/ಹೆಚ್‌ಪಿಸಿ/2022,ದಿ:05.04.2022 ಮತ್ತು 05.09.2022.

2. ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳು ಸಲ್ಲಿಸಿರುವ ಪ್ರಸ್ತಾವನೆಗಳು.

* * * * * *

**ಪ್ರಸ್ತಾವನೆ:**

2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ ಲೆಕ್ಕಶೀರ್ಷಿಕೆ:2202-03-103-2-08 (051)' ವಿದ್ಯಾರ್ಥಿನಿಲಯಗಳು' ಅಡಿಯಲ್ಲಿ ಕಛೇರಿ ವೆಚ್ಚ ಹಾಗೂ ಇತರೆ ವೆಚ್ಚಗಳಗಾಗಿ ಒದಗಿಸಿರುವ ರೂ.6.00 ಲಕ್ಷಗಳ ಅನುದಾನದಲ್ಲಿ 2ನೇ ತ್ರೈಮಾಸಿಕ ಕಂತಿನವರೆಗೆ ರೂ.3.00 ಲಕ್ಷಗಳನ್ನು ಬಿಡುಗಡೆ ಮಾಡಿರುತ್ತಾರೆ.

ಸದರಿ ಅನುದಾನದಲ್ಲಿ ಉಲ್ಲೇಖ (2)ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯ ಮೇರೆಗೆ ವಿದ್ಯಾರ್ಥಿನಿಲಯಗಳ ಕಛೇರಿ ವೆಚ್ಚ ಹಾಗೂ ಇತರೆ ವೆಚ್ಚಗಳಗಾಗಿ ರೂ.1.50ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಈ ಆದೇಶ.

**ಆದೇಶ ಸಂಖ್ಯೆ:ಕಾಶಿಇ:02:ಯೋಜನೆ:ಅ.ಬಿ:2022-23, ದಿನಾಂಕ: 28.10.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಲೆಕ್ಕಶೀರ್ಷಿಕೆ: 2202-03-103-2-08 (051) 'ವಿದ್ಯಾರ್ಥಿನಿಲಯಗಳು' ಅಡಿಯಲ್ಲಿ ಅನುಬಂಧ-1 ರಲ್ಲಿನ ವಿದ್ಯಾರ್ಥಿನಿಲಯಗಳಿಗೆ ಕಛೇರಿ ವೆಚ್ಚ ಹಾಗೂ ಇತರೆ ವೆಚ್ಚಗಳಗಾಗಿ ರೂ.1.50 ಲಕ್ಷಗಳ ಅನುದಾನವನ್ನು ಆಯಾ ಕಾಲೇಜಿನ ಪ್ರಾಂಶುಪಾಲರುಗಳಿಗೆ ಬಿಡುಗಡೆ ಮಾಡಲಾಗಿದ್ದು ಸದರಿ ಅನುದಾನವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

**ಅನುದಾನವನ್ನು ಬಳಸಿಕೊಳ್ಳುವಾಗ ಈ ಕೆಳಕಂಡ ಷರತ್ತುಗಳನ್ನು ಪಾಲಿಸುವಂತೆ ಕಟ್ಟುನಿಟ್ಟಾಗಿ ತಿಳಿಸಲಾಗಿದೆ.**

1. ಲೆಕ್ಕಶೀರ್ಷಿಕೆ: 2202-03-103-2-08 ಉಪಲೆಕ್ಕಶೀರ್ಷಿಕೆ (051) ರಲ್ಲಿ ವಿದ್ಯಾರ್ಥಿನಿಲಯಗಳಿಗೆ ಕಛೇರಿ ವೆಚ್ಚ ಹಾಗೂ ಇತರೆ ವೆಚ್ಚಗಳಗಾಗಿ ಈ ಲೆಕ್ಕಶೀರ್ಷಿಕೆಯಡಿಯಲ್ಲಿಯೇ ಭರಿಸತಕ್ಕದ್ದು.
2. ಅನುದಾನವನ್ನು ಕೂಡಲೇ ಬಳಸಿಕೊಂಡು ಬಳಕೆ ಪ್ರಮಾಣ ಪತ್ರವನ್ನು ತಪ್ಪದೇ ಕಳುಹಿಸತಕ್ಕದ್ದು.
3. ಅನುದಾನವನ್ನು ಬಿಡುಗಡೆ ಮಾಡಿರುವ ಉದ್ದೇಶಕ್ಕಾಗಿಯೇ ಬಳಸತಕ್ಕದ್ದು.
4. ಅನುದಾನವನ್ನು ವಿನಿಯೋಗಿಸಿಕೊಳ್ಳುವಾಗ ಆರ್ಥಿಕ ನಿಯಮ, ಸರ್ಕಾರಿ ಆದೇಶ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 2000 ಹಾಗೂ ಅದರಡಿಯಲ್ಲಿನ ನಿಯಮಗಳನ್ನು ತಪ್ಪದೇ ಪಾಲಿಸುವುದು.

---2

5. ಕೇಂದ್ರ ಕಛೇರಿಯಿಂದ ಬಿಡುಗಡೆಯಾದ ಅನುದಾನದಲ್ಲಿ ಬಿಲ್ಲಿನ ಮೊತ್ತವನ್ನು ಪಾವತಿಸುವ ಸಮಯದಲ್ಲಿ Sec 51(1) of the KGST Act 2017 and Central GST Act 2017 ಪ್ರಕಾರ ನಿಯಮಗಳಲ್ಲಿ ಅವಕಾಶವಿದ್ದಲ್ಲಿ GST &CGST ಕಟಾಯಿಸಲು ಸೂಚಿಸಿದೆ.
6. ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು **ದಿ:20.11.2022 ರ ಒಳಗೆ** ಬಳಸಿಕೊಳ್ಳಲು ಕಟ್ಟುನಿಟ್ಟಾಗಿ ಸೂಚಿಸಿದೆ. ಅನುದಾನ ಅವಶ್ಯವಿಲ್ಲದಿದ್ದಲ್ಲಿ ಕೂಡಲೇ ಅನುದಾನವನ್ನು **ಮರುಒಪ್ಪಿಸಲು** ಸಹ ಸೂಚಿಸಿದೆ.

**(ಟಿಪ್ಪಣಿ ಇ-ಆಫೀಸ್ ಮುಖಾಂತರ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1. ಸಂಬಂಧಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
3. ಕಛೇರಿ ಪ್ರತಿ.

# ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

2022-23ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಲೆಕ್ಕಶೀರ್ಷಿಕೆ:2202-03-103-2-08(051) 'ವಿದ್ಯಾರ್ಥಿನಿಲಯಗಳು' ಅಡಿಯಲ್ಲಿ ಕಛೇರಿ ಮತ್ತು ಇತರೆ ವೆಚ್ಚಗಳಿಗಾಗಿ ಅನುದಾನ ಬಿಡುಗಡೆ ಮಾಡಿರುವ ವಿದ್ಯಾರ್ಥಿನಿಲಯಗಳ ಪಟ್ಟಿ.

**ಆದೇಶ ಸಂಖ್ಯೆ:ಕಾಶಿಇ:02:ಯೋಜನೆ:ಅ.ಬಿ:2022-23, ದಿನಾಂಕ: 28.10.2022ಕ್ಕೆ ಅನುಬಂಧ-1**

| ಕ್ರ.ಸಂ. | ಕಾಲೇಜಿನ ಹೆಸರು | ಬಿಡುಗಡೆ ಮಾಡಿರುವ ಅನುದಾನ (ರೂಗಳಲ್ಲಿ) |
|---|---|---|
| 1 | ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು -570005 | 31000 |
| 2 | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು -570005 | 40000 |
| 3 | ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಪಡುವಾರಹಳ್ಳಿ, ಮೈಸೂರು-570005 | 60000 |
| 4 | ಸರ್ಕಾರಿ ಬಾಲಕಿಯರ ಕಾಲೇಜು (ಸ್ವಾಯತ್ತ), ಮಂಡ್ಯ-571 401 | 11000 |
| 5 | ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ | 8000 |
| | ಒಟ್ಟು (ಒಂದು ಲಕ್ಷದ ಐವತ್ತು ಸಾವಿರ ರೂಗಳು ಮಾತ್ರ) | **150000** |

ನಿರ್ದೇಶಕರು

**ಕಾಲೇಜು ಶಿಕ್ಷಣ ಇಲಾಖೆ**